ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು 4 ಮತ್ತು 5 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎ. ಎಸ್ ರವರಿಂದ:-</u>

ನನಗೆ 67 ವರ್ಷ ವಯಸ್ಸು, ವಾದಿಗಳು ನನ್ನ ತಮ್ಮಂದಿರು ಮತ್ತು ತಾಯಿ. ನಾವೆಲ್ಲರೂ ಜೊತೆಯಲ್ಲಿ ವಾಸವಿದ್ದೇವೆ ಎಂದರೆ ಸಾಕ್ಷಿಯು 2003 ರಿಂದ ಬೇರೆ ಬೇರೆ ವಾಸವಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಸರ್ವೇ ನಂಬರ್ 33. ಸದರಿ ಸ್ವತ್ತು ನನ್ನ ತಂದೆ ಚಿಕ್ಕಹೆಂಜಯ್ಯರವರಿಗೆ ಕ್ರಯದ ಮೂಲಕ ಬಂದಿದ್ದು ಅವರ ಸ್ವಯಾರ್ಜಿತ ಸ್ವತ್ತು ಆಗಿರುತ್ತದೆ. ಸದರಿ ಕ್ರಯ ಪತ್ರವನ್ನು ಹಾಜರು ಮಾಡಿದ್ದೇನಾ ಎಂದರೆ ವಾದಿಗಳು ಮಾಡಿದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ.

ವಾದಿಗಳಿಗೆ ಸದರಿ ಕ್ರಯ ಪತ್ರ ಹೇಗೆ ಸಿಕ್ಕಿತ್ತು ಎಂದರೆ ಸಾಕ್ಷಿಯು ಉಪ ನೋಂದಣಿ ಕಛೇರಿಯಿಂದ ದೃಢಿಕೃತ ನಕಲನ್ನು ಪಡೆದುಕೊಂಡು ಹಾಜರುಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಬಳಿ ಇದ್ದ ಅಸಲು ಕ್ರಯ ಪತ್ರವನ್ನು ನನ್ನನಿಂದ ಯಾರೋ ಕಸಿದುಕೊಂಡು ಹೋಗಿದ್ದರು ನನ್ನ ಕುಟುಂಬದ ಜಾವಾಬ್ದಾರಿಯನ್ನು ಹಾಗೂ ಆಸ್ತಿಗಳ ವ್ಯವಹಾರವನ್ನು ನಾನೇ ಮಾಡುತ್ತಿದ್ದೇನೆ ಎಂದರೆ ಸಾಕ್ಷಿಯು ನನ್ನ ತಾಯಿ ಹೇಳಿದಂತೆ ನಾನು ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಅವರು ಸೇರಿದಂತೆ ಮೂವರು ಸಹೋದರರು ಸಾಕ್ಷಿಯು ಸಹ ನನ್ನ ದೊಡ್ಡಪ್ಪ, ತಂದೆ ಹಾಗೂ ಚಿಕ್ಕಪ್ಪ ಎಂದು ನುಡಿಯುತ್ತಾರೆ ಅವರ ಹೆಸರು ಎಂದರೆ ದೊಡ್ಡ ಹೆಂಜಯ್ಯ, ನನ್ನ ತಂದೆ ಚಿಕ್ಕಹೆಂಜಯ್ಯ ಮತ್ತು ಹೆಂಜಾರಯ್ಯ.

ಹೆಂಜಾರಯ್ಯರವರನ್ನು ಕುಂಟಪ್ಪ ಎಂದು ಕರೆಯುತ್ತಿದ್ದರು ಎಂದರೆ ಸುಳ್ಳು ಎಂದು ಸಾಕ್ಷಿಯು ನುಡಿಯುತ್ತಾರೆ ನನ್ನ ತಂದೆಯ ತಂದೆ ಅರಸಯ್ಯ ಎಂದರೆ ಸರಿ. ಅರಸಯ್ಯ ಸೇರಿದಂತೆ ಅವರಿಗೆ ಮೂವರು ಸಹೋದರರು ಎಂದರೆ ಸಾಕ್ಷಿಯು ಮೂವರು ಸಹೋದರರು ಎಂದು ನನ್ನ ತಂದೆ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾತನ ತಮ್ಮ ಸಿದ್ದಯ್ಯ ಮತ್ತು ಇನ್ನೋಬ್ಬ ತಮ್ಮ ಹೆಂಜಾರಯ್ಯ ಎಂದರೆ ಸರಿ. ನನ್ನ ತಾತನ ತಮ್ಮ ಸಿದ್ದಯ್ಯನವರ ಮಕ್ಕಳೇ 4 ಮತ್ತು 5 ನೇ ಪ್ರತಿವಾದಿಗಳು ಎಂದರೆ ಸರಿ. ನನ್ನ ಇನ್ನೋಬ್ಬ ತಾತ ಹೆಂಜಾರಯ್ಯನವರಿಗೆ ಗಂಡು ಮಕ್ಕಳು ಇರಲಿಲ್ಲ ಹಾಗೂ ನಿಂಗಮ್ಮ ಎಂಬ ಒಬ್ಬಳೇ ಮಗಳು ಎಂದರೆ ಸರಿ.

ನಮ್ಮ ಕುಟುಂಬಕ್ಕೆ ಸೇರಿದ ಸುಮಾರು 40 ಆಸ್ತಿಗಳು ಇವೆ. ಸದರಿ ಆಸ್ತಿಗಳಲ್ಲಿ ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತುಗಳು, ನಮ್ಮ ತಾಯಿ ಸ್ವಯಾರ್ಜಿತ ಸ್ವತ್ತುಗಳು ಅಂದರೆ ಕ್ರಯಕ್ಕೆ ಪಡೆದ ಸ್ವತ್ತುಗಳು, ನನ್ನ ಸ್ವಯಾರ್ಜಿತ ಸ್ವತ್ತುಗಳು ಮತ್ತು ನನ್ನ ಚಿಕ್ಕ ತಾತ ಹೆಂಜಾರಯ್ಯನವರು ಸ್ವಂತ ಕ್ರಯಕ್ಕೆ ಪಡೆದ ಸ್ವತ್ತುಗಳು ಸೇರಿವೆ. ಸದರಿ 40 ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಅಗಿದ್ದು ಅರಸಯ್ಯ ಸಿದ್ದಯ್ಯ ಮತ್ತು ಹೆಂಜಾರಯ್ಯನವರ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸುಳ್ಳು ಎಂದು ಸಾಕ್ಷಿಯು ನುಡಿಯುತ್ತಾರೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಆಗಿದ್ದು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದ ಆಸ್ತಿ ಎಂದರೆ ಸರಿಯಲ್ಲ ಸಾಕ್ಷಿಯು ಸ್ವತಃ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ

ಈ ದಾವೆಯನ್ನು ವಾದಿಗಳು ಯಾಕೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು

1 ನೇ ಪ್ರತಿವಾದಿ 2 ನೇ ಪ್ರತಿವಾದಿಯಿಂದ ದಾವಾ ಸ್ವತ್ತು ಖರೀದಿಸಿದ್ದಾರೆ ಎಂದು ತಿಳಿದ ನಂತರ ವಾದಿಗಳು ಸೃಷ್ಠಿ ಕ್ರಯ ಪತ್ರ ಎಂದು ಈ ದಾವೆ ಹಾಕಿರುತ್ತಾರೆ. 2 ನೇ ಪ್ರತಿವಾದಿ ಯಾರಿಂದ ಯಾವ ಪತ್ರದ ಮಾಲಕ ದಾವಾ ಆಸ್ತಿ ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು 2 ನೇ ಪ್ರತಿವಾದಿ ಅಧಿಕಾರ ಪತ್ರವನ್ನು ಸೃಷ್ಠಿಸಿಕೊಂಡು 1 ನೇ ಪ್ರತಿವಾದಿಯೊಂದಿಗೆ ಸೇರಿ ಕ್ರಯ ಪತ್ರವನ್ನು ಸೃಷ್ಠಿಸಿದ್ದಾರೆ ಎಂದು ನುಡಿಯುತ್ತಾರೆ. ಯಾರು ಯಾರು ಬೆರದುಕೊಟಿದ್ದಾರೆ ಎಂಬ ರೀತಿ ಅಧಿಕಾರ ಪತ್ರ ಸೃಷ್ಠಿಸಿದಾ್ದರೆ ಎಂದರೆ ಸಾಕ್ಷಿಯು ವಾದಿಗಳು ಹಾಗೂ ನಾನು ಎಂದು ನುಡಿಯುತ್ತಾರೆ.

ನಾನು ತವರೆಕೆರೆ ಹೋಬಳಿಯ ಚಿಕ್ಕನಹಳ್ಳಿ ಗ್ರಾಮಪಂಚಾಯಿತಿ ಸದಸ್ಯ ಆಗಿದ್ದೇ ಎಂದರೆ ಸರಿ. ನಾನು ಸದರಿ ಪಂಚಾಯಿತಿಯ ಅಧ್ಯಕ್ಷನಾಗಿರಲಿಲ್ಲ. ನಾನು 1994 ರಿಂದ 1998 ರವರೆಗೆ ಸದಸ್ಯನಾಗಿದ್ದೆ ಆಗ ನನಗೆ ಅಂದಾಜು 42 ವರ್ಷ ವಯಸ್ಸಾಗಿತ್ತು ಸಾಕ್ಷಿಯು ನಾನು 1952 ಜನಿಸಿದ್ದದೇ ಎಂದು ನುಡಿಯುತ್ತಾರೆ 1994 ರಿಂದ 1998 ರವರೆಗಿನ ಅವಧಿಯಲ್ಲಿ ನಮ್ಮ ಕುಟುಂಬದ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದೆ ಎಂದರೆ ಸಾಕ್ಷಿಯ ಮೊದಲಗೆ ಸರಿ ಎಂದು ಹೇಳಿ ನಂತರ ತಾಯಿ ಮತ್ತು ತಮ್ಮಂದಿರು ಹೇಳಿದಂತೆ ನೋಡಿಕೊಳ್ಳುತ್ತಿದೆ ಎಂದು ನುಡಿಯುತ್ತಾರೆ. ಆಗ ನಾವು ಆಥಿರ್ಕವಾಗಿ ಚೆನ್ನಾಗಿ ಇದ್ದೇವೊ ಎಂದರೆ ಸಾಕ್ಷಿಯು ಆಷ್ಟೋಂದು ದೊಡ್ಡತನ ಇರಲ್ಲಿಲ ಮಾಧ್ಯಮವಾಗಿದ್ದೇವೊ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನಗೆ ಅಧಿಕಾರ ಬಲ ಹಣ ಬಲ ಮತ್ತು ವಯಸ್ಸು ಇದ್ದ ಕಾರಣ ನನ್ನ ಸಹೋದರರು ಹಾಗೂ ಒಟ್ಟು ಕುಟುಬಂದವರಿಗೆ ಮೋಸ

ಮಾಡಲು ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳ ಖಾತೆಯನ್ನು ನನ್ನ ಹಾಗೂ ನನ್ನ ತಾಯಿಯ ಹೆಸರಿಗೆ ಬದಲಾಯಿಸಿದೆ ಎಂದರೆ ಸರಿಯಲ್ಲ. ಈ ದಾವಾ ಸ್ವತ್ತುನ್ನು ಈ ದಾವೆಯ 4 ಮತ್ತು 5ನೇ ಪ್ರತಿವಾದಿಗಳು ಓ.ಎಸ್ 120/2007 ದಾವೆಯಲ್ಲಿ ಸೇರಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ 4 ಮತ್ತು 5ನೇ ಪ್ರತಿವಾದಿಗಳಿಗೂ ಹಾಗೂ ಸದರಿ ಸ್ವತಿಗೂ ಯಾವುದೇ ಸಂಬಂದವಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಅವರು ನಮ್ಮ ವಂಶವೃಕ್ಷಕೆ ಸೇರಿದವರಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ದಾವಾ ಸ್ವತ್ತಿನ ಬಗ್ಗೆ 1 ಮತ್ತು 2 ನೇ ಪ್ರತಿವಾದಿಗಳೊಂದಿಗೆ ಮಾಡಿಕೊಂಡ ವ್ಯವಹಾರಗಳಲ್ಲಿ 4 ಮತ್ತು 5ನೇ ಪ್ರತಿವಾದಿಗಳನ್ನು ಸೇರಿಸಿಕೊಂಡಿರಲಿಲ್ಲ ಎಂದರೆ ಸಾಕ್ಷಿಯು ಅವರು ನಮ್ಮ ಕುಟುಂಬಕ್ಕೆ ಸೇರಿದವರಲ್ಲದ ಕಾರಣ ನಮಗೆ ಅವರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. 4 ಮತ್ತು 5ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತಿನ ಮೇಲೆ ಹಕ್ಕು ಇದ್ದರು ಕೂಡ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಉಳಿದಂತೆ 1ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ.,
ರಾಮನಗರ.